# ಅಲಂಕಾರಿಕ ಕೋಸು!





■ ಮಂಜುನಾಥ ಡಿ.ಎಸ್.

ವಿಶಾಲವಾದ ಎಲೆಗಳಿಂದ ಕೂಡಿ ದೊಡ್ಡ ಗುಲಾಬಿಯಂತೆ ಕಂಗೊಳಿಸುವ ರಮನೀಯ ಕೋಸು ಬಿಳಿ, ನೇರಳೆ, ನಸುಗೆಂಪು ಅಥವಾ ಕೆಂಪು ಬಣ್ಣ ಹೊಂದಿರುತ್ತದೆ. ಇದು ಖಾದ್ಯ ತರಕಾರಿಗಳಾದ ಕೋಸು, ಹೂಕೋಸು, ಮತ್ತು ಬ್ರಾಕೊಲಿಗಳಂತೆ ಬ್ರಾಸಿಕ ಒಲೆರೇಸಿಯ ಗುಂಪಿಗೆ ಸೇರಿದೆ. ಈ ಶಾಸ್ತ್ರೀಯ ಹೆಸರಿನ ಪೂರ್ವ ಪದ ಲ್ಯಾಟಿನ್ ಭಾಷೆಯದಾಗಿದ್ದು ಕೋಸು ಎಂಬ ಅರ್ಥ ಹೊಂದಿದೆ. ಎರಡನೆಯ ಪದದ ಅನುವಾದ ತರಕಾರಿ ತೋಟ ಎಂಬುದಾಗಿದೆ.

ಆರ್ನಮೆಂಟಲ್ ಕ್ಯಾಬೇಜ್ ಅರ್ಥಾತ್ ಅಲಂಕಾರಿಕ ಕೋಸು ಕಹಿ ರುಚಿ ಹೊಂದಿರುತ್ತದೆ. ಇದು ಖಾದ್ಯಯೋಗ್ಯವಾಗಿದ್ದರೂ ಸಾಧಾರಣವಾಗಿ ಇದನ್ನು ಅಡುಗೆಯಲ್ಲಿ ಬಳಸುವುದಿಲ್ಲ. ಭೋಜ್ಯಾಲಂಕಾರದಲ್ಲಿ ವಿರಳವಾಗಿ ಬಳಸುತ್ತಾರೆ. ಪರ್ಯಾಯವಾಗಿ, ಇದು ಉದ್ಯಾನವನಗಳನ್ನು ವರ್ಣರಂಜಿತವನ್ನಾಗಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಬೆಡಗಿನ ಎಲೆಗಳಿಗಾಗಿಯೇ ಬೆಳೆಸುವ ಇದರ ಪ್ರಚಲಿತ ಹೆಸರು ಹೂಬಿಡುವ ಕೋಸು!

ಸುಮಾರು ಒಂದು ಅಡಿ ವ್ಯಾಸದ ಅಲಂಕಾರಿಕ ಕೋಸು ಒಂದೂವರೆ ಅಡಿ ಎತ್ತರದವರೆಗೆ ಬೆಳೆಯುತ್ತದೆ. ತಂಪು ವಾತಾವರಣ ಇದಕ್ಕೆ ಸೂಕ್ತ. ಹದಿನೇಳನೆಯ ಶತಮಾನದಲ್ಲಿ ಜಪಾನಿನ ಉದ್ಯಾನವನಗಳಲ್ಲಿಯೇ ಇದು ಜನಪ್ರಿಯವಾಗಿತ್ತು. ಶೆಫ್‌ಗಳ ಅಚ್ಚುಮೆಚ್ಚು ಕೂಡ.